**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ**

| | | |
|---|---|---|
| ಸಿ.ಸಿ.ನಂಬರ್ | : | 980/2023 |
| ಪಿ.ಡಬ್ಲ್ಯು | : | 2 |
| ಸಿ.ಡಬ್ಲ್ಯು | : | 1 |

| | | |
|---|---|---|
| ಸಾಕ್ಷಿದಾರರ ಹೆಸರು | : | ರವಿ ಯಡವನ್ನವರ |
| ತಂದೆಯ ಹೆಸರು | : | ಮಲ್ಲಪ್ಪ |
| ವಯಸ್ಸು | : | 37 |
| ಉದ್ಯೋಗ | : | ಪಿ ಎಸ್ ಐ, ಎಸ್ ಪಿ ಕಚೇರಿ |
| ವಾಸಸ್ಥಳ | : | ವಿಜಯಪುರ |

ಸಾಕ್ಷಿಗೆ ಇಂದು ದಿನಾಂಕಃ 04.03.2024 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ**

ದಿ11.4.22 ರಿಂದ 02.02.23 ರವರೆಗೆ ಕಲಕೇರಿ ಪೊಲೀಸ್ ಠಾಣೆಯ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ.22.05.2022 ರಂದು ಬೆಳಿಗ್ಗೆ 8.30 ಕ್ಕೆ ನನ್ನ ಅಧಿನ ಸಿಬ್ಬಂದಿಗಳೊಂದಿಗೆ ಸರ್ಕಾರಿ ವಾಹನದಲ್ಲಿ ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದಾಗ ಖಚಿತ ಮಾಹಿತಿ ಬಂದಿದ್ದು, ಹಡಗಿನಾಳ ಕಡೆ ಇಂದ ಗುಬ್ಬವಾಡ ಕಡೆಗೆ ಕಮಾಂಡರ ಜೀಪನಿಂದ ಒಬ್ಬ ವ್ಯಕ್ತಿಗೆ ಅಪಘಾತ ಪಡಿಸಿ ನಿಲ್ಲಿಸಿದು ಅದರಲ್ಲಿ ಮದ್ಯ ತುಂಬಿದ ಬಾಕ್ಸ ಇರುತ್ತವೆ ಎಂದು ಮಾಹಿತಿ ಹೇಳಿದ್ದು ತಕ್ಷಣ ಸದರಿ ಮಾಹಿತಿ ನನ್ನ ಮೇಲಾಧಿಕಾರಿಗಳಿಗೆ ತಿಳಿಸಿ ನನ್ನ ಜೊತೆಗೆ ಇದ್ದ ಸಿಬ್ಬಂದಿಗಳಿಗೆ ವಿಷಯ ತಿಳಿಸಿ 8.35 ಕ್ಕೆ ಗುಬ್ಬೇವಾಡ ಕಡೆಗೆ ಹೊರಟು ಗುರುರಾಜ ಯಮನಪ್ಪ ಕೊಡಂಗುಳಿ ಇವರ ಮನೆ ಹತ್ತಿರ 9.10 ಕ್ಕೆ ಹೋದಾಗ ಸ್ಥಳದಲ್ಲಿ ಒಂದು ಕಮಾಂಡರ ಜೀಪ್ ನಿಂತಿದ್ದು ಅದರ ಸುತ್ತುಮುತ್ತ ಜನರು ನಿಂತಿದ್ದರು.

ಸುತ್ತಲು ನಿಂತ ಜನರಿಗೆ ವಿಚಾರಿಸಿದಾಗ ಅದರಲ್ಲಿ ಒಬ್ಬರು ಮುಂಜಾನೆ 6.30 ಕ್ಕೆ ಹಡಗಿನಾಳ ಕಡೆ ಇಂದ ಗುಬ್ಬವಾಡ ಕಡೆಗೆ ಕಮಾಂಡರ ಜೀಪನಿಂದ ಒಬ್ಬ ವ್ಯಕ್ತಿಗೆ ಅಪಘಾತ ಪಡಿಸಿದ್ದು, ಸದರಿ ವ್ಯಕ್ತಿಯನ್ನು ಚಿಕಿತ್ಸಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಇರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ಸದರಿ ಜೀಪ್ ಪರಿಶೀಲನೆ ಮಾಡಿದಾಗ ಮದ್ಯ ತುಂಬಿದ ಬಾಕ್ಸಗಳು ಇರುತ್ತವೆ ಎಂದು ತಿಳಿಸಿರುತ್ತಾರೆ. ನಾವು ವಾಹನ ಪರಿಶೀಲಿಸಿದಾಗ ಮದ್ಯ ತುಂಬಿದ ಬಾಕ್ಸಗಳು ಇದ್ದವು. ಅಲ್ಲೆ ಇದ್ದ ಜನರನ್ನು ಸದರಿ ವಾಹನದ ಮತ್ತು ಮದ್ಯ ತುಂಬಿದ ಬಾ ಕ್ಸಗಳ ಪಂಚನಾಮೆ ಮಾಡುತ್ತೇವೆ ಎಂದು ಕೋರಿದಂತೆ ಚಾಸಾ-2 ಮತ್ತು 3 ರವರು ಪಂಚರಾಗಲು ಒಪ್ಪಿದ್ದು, ಅವರ ಸಮಕ್ಷಮ ಕೂಡಲೆ ಜೀಪನಲ್ಲಿದ್ದ ಮದ್ಯದ ಬಾಕ್ಸಗಳನ್ನು ಪರಿಶೀಲನೆ ಮಾಡಿದಾಗ ಒರಿಜನಲ ಚಾಯಿಸ್ ನ 90 ಎಂ ಎಲ್ ಒಟ್ಟು 6 ಬಾಕ್ಸಗಳು ಪ್ರತಿಬಾಕ್ಸನಲ್ಲಿ 96 ಟೆಟ್ರಾ ಪ್ಯಾಕೇಟ ಇದ್ದವು. ಇನ್ನೊಂದು ಬಾಕ್ಸನಲ್ಲಿ ಬ್ಯಾಗ ಪೈಪರ ನ 180 ಎಂ ಎಲ್ ಒಟ್ಟು 120 ಟೆಟ್ರಾ ಪ್ಯಾಕೇಟಗಳು ಇದ್ದವು. 1 ಬಾಕ್ಸ ಇಂಪರಿಯಲ್ ಬ್ಲ್ಯೂ 180 ಎಂ ಎಲ್ ಒಟ್ಟು 42 ಗಾಜಿನಬಾಟಲಗಳು, ಕಿಂಗ್ ಪಿಶರ್ ನ 3 ಬಾಕ್ಸಗಳು 650 ಎಂ ಎಲ್ ನ ಪ್ರತಿ ಬಾಕ್ಸನಲ್ಲಿ 12 ಬಾಟಲಗಳು ಮತ್ತು ಮಹಿಂದಾರ ಕೆಎ 27 ಎಂ 0439 ನ ಜೀಪ ಅನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಜಪ್ತಪಡಿಸಿ ಪ್ರತಿಯೊಂದು ಬಾಕ್ಸನಿಂದ ಯಾದ್ರಿಚ್ಚಿಕವಾಗಿ ಎರಡೆರಡು ಟೆಟ್ರಾ ಪ್ಯಾಕೇಟ ಮತುತ ಗಾಜೀನ ಬಾಟಲಿ ವಿದಿ ವಿಜ್ಞಾನ ಪ್ರಯೋಗಾಲಯಕ್ಕೆ ಬೇರ್ಪಡಿಸಿ ಪಂಚರ ಚೀಟಿ ಅಂಟಿಸಿದೆವು. ಪಂಚನಾಮೆ 9.30 ರಿಂದ 10.30 ರವರೆಗೆ ಜರುಗಿಸಿರುತ್ತೇನೆ. ನಂತರ ಜಪ್ತಪಡಿಸಿದ ಮುದ್ದೆ ಮಾಲು ವಾಹನ ಮತ್ತು 1 ನೇ ಆರೋಪಿಯನ್ನು ಕಲಕೇರಿ ಠಾಣೆಗೆ ತಂದು ಸರ್ಕಾರದ ಪರ ದೂರು ಚಾಸಾ-16 ರವರ ಮುಂದೆ ದಾಖಲಿಸಿದ್ದೇನೆ. ಸಾಕ್ಷಿ ದೂರು ನೋಡಿ ಗುರುತಿಸಿದ್ದು ಅದನ್ನು ನಿಪಿ2 ಸಾಕ್ಷಿ ಸಹಿ ನಿಪಿ2 ಎಂದು ಗುರುತಿಸಲಾಯಿತು. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿಪಿ1 ಎಂದು ಗುರುತಿಸಿದ್ದು, ಸಾಕ್ಷಿ ಸಹಿ ನಿಪಿ1 ಬಿ ಎಂದು ಗುರುತಿಸಲಾಯಿತು. ದಿ.11.12.2022 ರಂದು 2 ನೇ ಆರೋಪಿ ಮಾನ್ಯ ಜಿಲ್ಲಾ ನ್ಯಾಯಾಲಯದಿಂದ ನಿರೀಕ್ಷಣಾ ಜಮೀನು ಪಡೆದು ಠಾಣೆಗೆ ಹಾಜರಾಗಿದ್ದು ಚಾಸಾ-16 ರವರು 2 ನೇ ಆರೋಪಿಯನ್ನು ನನಗೆ ತೋರಿಸಿರುತ್ತಾರೆ.

ಸಾಕ್ಷಿ ಮುದ್ದೆ ಮಾಲು ನೋಡಿ ಗುರುತಿಸಿದ್ದು ಜಪ್ತಪಡಿಸಿದ ಟೆಟ್ರಾ ಪ್ಯಾಕೇಟ ಮತ್ತು ಬಾಟಲಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು ಮಾ 1 ರಿಂದ 8 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು ಃ ಆರೋಪಿ ಪರ ಶ್ರೀ ಎಸ್ ಬಿ ಡಿ ವಕೀಲರಿಂದ</u>**

ದಿ.22.05.22 ರಂದು ನನಗೆ ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಸರಿಯಲ್ಲ. ಅಲ್ಲಿ ನೆರದಿದ್ದ ಜನರಿಗೆ ನಾವು ಪಂಚರಾಗಲು ಕೋರಿಲ್ಲ ಎಂದರೆ ಸರಿಯಲ್ಲ. ಜಪ್ತಪಡಿಸಿದ ವಾಹನದಲ್ಲಿ ಯಾವುದೇ ಮದ್ಯದ ಟೆಟ್ರಾ ಪ್ಯಾಕೇಟ ಮತ್ತು ಬಾಟಲಗಳು ಇರಲಿಲ್ಲ ಎಂದರೆ ಸರಿಯಲ್ಲ. ಅಲ್ಲಿ ನೆರೆದ ಜನರಿಲ್ಲಿ ನಾವು ಕಲವರಿಗೆ ಹೆಸರು ಕೇಳಿದ್ದು ಅವುಗಳಲ್ಲಿ ಮೈಬೂಬ ಬಿರಾದಾರ, ಮಹೇಶ ಕೊಂಡಗೂಳಿ, ನಾನು ಯಾವುದೇ ವ್ಯಕ್ತಿಗಳಿಗೆ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ1 ರಂತೆ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ ಟೆಟ್ರಾ ಪ್ಯಾಕೇಟ ಮತ್ತು ಬಾಟಲಗಳನ್ನು ಹೊರತುಪಡಿಸಿ ಬೇರೆ ಟೆಟ್ರಾ ಪ್ಯಾಕೆಟ ಮತ್ತು ಬಾಟಲಗಳಲ್ಲಿ ಮದ್ಯ ಇತ್ತು ಎಂದು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ಮು ಮಾಲಿಗು ಆರೋಪಿತರಿಗು ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿ ಅರ್ಪಿತಾ ವೈನ್ಸ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಾನೆ ಎಂದು ನನಗೆ ಚಾಸಾ16 ತಿಳಿಸಿರುತ್ತಾನೆ. 2ನೇ 2ನೇ ಆರೋಪಿ ಅರ್ಪಿತಾ ವೈನ್ಸ ವ್ಯವಸ್ಥಾಪಕನಾಗಿರುವ ಬಗ್ಗೆ ಚಾಸಾ16 ದಾಖಲೆ ಪಡೆದ ವಿಚಾರ ನನಗೆ ಗೊತ್ತಿಲ್ಲ. ಅಂಕಿಸಂಖ್ಯೆಗಳಿಗಾಗಿ ಪ್ರುಸ್ತು ದೂರು ದಾಖ್ಲಿಸಿ, ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.